ದಿಃ 14.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**(ವಿಶೇಷ ಅಭಿಯೋಜಕರು ಈ ಹಿಂದೆ 13 ಜನ ಆರೋಪಿತರು ಕೊಲೆ ಮಾಡಿದ್ದರು ಎಂದು ಕಾಣಿಸಿಕೊಟ್ಟಿದ್ದು, ಆದರೆ ಎಲ್ಲರ ಹೆಸರು ತಿಳಿಸಿಕೊಡದೆ ಇರುವ ಹಿನ್ನಲೆಯಲ್ಲಿ, ಈ ಕುರಿತು ಪಾಟೀ ಸವಾಲು ಮಾಡಲು ಪ್ರಾರ್ಥನೆ ಮಾಡಿದ್ದು, ಪ್ರಶ್ನೆ ಮಾಡುವುದು ಸೂಕ್ತವೆಂದು ನ್ಯಾಯಾಲಯ ಅರ್ಥೈಸಿಕೊಂಡು ಆರೋಪಿತರ ಪರ ವಕೀಲರು ಅಕ್ಷೇಪಣೆ ಮಾಡಿದ್ದನ್ನು ತಳ್ಳಿಹಾಕಲಾಗಿದೆ. )**

**ಪಾಟೀ ಸವಾಲುಃ** ವಿಶೇಷ ಅಭಿಯೋಜಕರಿಂದಃ

ಈ ಹಿಂದೆ ಕೆಲವರ ಹೆಸರುಗಳನ್ನು ಕಾಣಿಸಿಕೊಟ್ಟಿದ್ದು, ಆದರೆ ಮಲ್ಲಪ್ಪ ಹುದ್ದಾರ, ಶಂಕ್ರಪ್ಪ ಗುಡದಿನ್ನಿ, ರಾಜು ಮುಚ್ಚಂಡಿ ಇವರುಗಳ ಹೆಸರುಗಳನ್ನು ಅಂದು ತಿಳಿಸಿಕೊಟ್ಟಿಲ್ಲ ಎಂದರೆ ಸರಿ. ಆ ದಿನ ಈ ಮೂವರು ವ್ಯಕ್ತಿಗಳು ನ್ಯಾಯಾಲಯದಲ್ಲಿ ಇದ್ದರು ಅದಕ್ಕೆ ಅವರ ಹೆಸರುಗಳನ್ನು ಹೇಳಿದ್ದು ಇರುವುದಿಲ್ಲ ಎಂದರೆ ಸರಿ. ಅವರು ಕಸ್ಟಡಿಯಲ್ಲಿ ಇದ್ದಿದ್ದಕ್ಕೆ ನಾನು ಅಂಜಿ ಅವರ ಹೆಸರು ಹೇಳಿದ್ದು ಇರುವುದಿಲ್ಲ.

**(ವಿಶೇಷ ಅಭಿಯೋಜಕರು ಪ್ರಸ್ತುತ ಪ್ರಕರಣ ನಡೆದ motive ನ್ನು ಸಾಕ್ಷಿ ಮುಖಾಂತರ ಹೇಳಿಸಲು ಇಚ್ಚೆ ಪಟ್ಟಿದ್ದು, ಅದಕ್ಕೆ ಆರೋಪಿ ಪರ ವಕೀಲರು ಅಕ್ಷೇಪಣೆ ನೀಡಿದ್ದು, ಆದರೆ ಈ ಹಂತದಲ್ಲಿ ನ್ಯಾಯಾಲಯ ಯಾವುದೇ ಪ್ರತಿಕ್ರಿಯೆ ನೀಡದೆ ಅದನ್ನು ಬರಹ ಮಾಡುವುದು ಸೂಕ್ತ ತೀರ್ಪು ಹೊರಡಿಸುವ ಅಡಿ ಅದರ ಮಾನ್ಯತೆಯನ್ನು ತಿಳಿದುಕೊಳ್ಳುವುದು ಇದೆ ಎಂದು ಅರ್ಥೈಸಿಕೊಂಡಿದೆ.)**

ಚಾಸಾ-1, 16 ರಿಂದ 27 ರವರು ನನಗೆ ಸಂಬಂಧಿಕರು ಆಗಬೇಕು ಎಂದರೆ ಸರಿ. ಮೇ ತಿಂಗಳದಲ್ಲಿ ಯಲ್ಲಪ್ಪನ ಮನೆಯನ್ನು ಆರೋಪಿತರು ಹೊಡೆದಿದ್ದು ಇತ್ತು ಎಂದರೆ ಸರಿ. ಅವರು ಜಾಮೀನಿನಲ್ಲಿ ಬಂದು ಈ ಕೊಲೆಯಲ್ಲಿ ಭಾಗವಹಿಸಿದ್ದಾರೆ ಎಂದರೆ ಸರಿ. ಆರೋಪಿತರು ಕೊಲೆ ಮಾಡಿದ್ದು, ಅವರ ಜಾತಿ ಮೇಲಜಾತಿ ಎಂದರೆ ಸರಿ. ನಮ್ಮದು

ಮಾದರ ಜಾತಿ ಎಂದರೆ ಸರಿ. ಇದೇ ಉದ್ದೇಶದಿಂದ ಆರೋಪಿತರು ಕೊಲೆ ಮಾಡಿರುತ್ತಾರೆ ಎಂದರೆ ಸರಿ.

**ಹೆಚ್ಚುವರಿ ಪಾಟೀ ಸವಾಲುಃ ಶ್ರೀ.ಎ.ಬಿ.ಜೆ.,**ಆರೋಪಿ-**1, 14** ಹಾಗೂ **15** ಪರ ವಕೀಲರಿಂದ

ಆರೋಪಿ-1, 14 ಹಾಗೂ 15 ರವರ ಹೆಸರು ಈಗ ಮೇಲೆ ಕಾಣಿಸಿಕೊಟ್ಟಿದ್ದು, ಅವರುಗಳು ಇಂದೂ ಸಹ ನ್ಯಾಯಿಕ ಬಂಧನದಲ್ಲಿ ಇದ್ದಾರೆ ಎಂದರೆ ಸರಿ. ಈ ಮೂವರು ಜನ ಜೈಲಿನಲ್ಲಿ ಇದ್ದಾಗ ನಿಮಗೆ ಹೆದರಿಸಿದ್ದು ಇತ್ತು ಎಂದು ಕಾಣಿಸಿಕೊಟ್ಟಿದ್ದು ಯಾವ ದಿನ ಹಾಗೂ ಸಮಯ ನಿಮಗೆ ಹೆದರಿಸಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ಜೈಲಿನಲ್ಲಿ ಇದ್ದು ಅವರು ಹೆದರಿಸಿಲ್ಲ, ಇತರೆ ವ್ಯಕ್ತಿಗಳು ಹೆದರಿಸಿದರು ಎಂದು ನುಡಿಯುತ್ತಾರೆ, ಸಾಕ್ಷಿಯು ಪುನಃ ಮುಂದುವರೆದು ಆರೋಪಿತರು ಎಂದು ನುಡಿಯುತ್ತಾರೆ. ಆ ರೀತಿ ಇತರೆ ಆರೋಪಿತರು ಹೆದರಿಸಿದ್ದಕ್ಕೆ ಏನಾದರೂ ಪಿರ್ಯಾದು ನೀಡಿದ್ದು ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಪೊಲೀಸರು ಘಟನೆಗೆ ಸಂಬಂಧಿಸಿದಂತೆ ನನ್ನನ್ನು ವಿಚಾರಿಸಿದ್ದು ಇತ್ತು.

ಈಗ ಮೇಲೆ ಮಾಡಿದ ಪಾಟೀ ಸವಾಲಿನಲ್ಲಿ ಇತರೆ ಆರೋಪಿತರು ಮನೆ ಒಡೆದ ಪ್ರಕರಣದಲ್ಲಿ ಜಾಮೀನು ಪಡೆದು ಬಂದು ಈ ಒಂದು ಪ್ರಕರಣದಲ್ಲಿ ಕೊಲೆ ಮಾಡಿ ಭಾಗಿಯಾಗಿದ್ದು ಇತ್ತು ಎಂಬುದರ ಕುರಿತು ಸಂಗತಿಗಳನ್ನು ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಈಗ 3 ಜನರ ಹೆಸರು ಹಾಗೂ ಅಂದು 8 ಜನರ ಆರೋಪಿತರ ಹೆಸರು ಕಾಣಿಸಿಕೊಟ್ಟಿದ್ದು ಅವರು ಕೊಲೆ ಮಾಡಿರುವುದಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿ 2 ಮೃತ ವ್ಯಕ್ತಿಗಳ ಮೇಲೆ ಕೊಲೆ ಪ್ರಕರಣ ಹಾಗೂ ಇತರೆ ಪ್ರಕರಣಗಳು ದಾಖಲಾಗಿತ್ತು **ಎಂದು ಆರೋಪಿ ಪರ ವಕೀಲರು ಪ್ರಶ್ನೆ ಸೂಚಿಸಿದ್ದು**

**ಅದಕ್ಕೆ ವಿಶೇಷ ಅಭಿಯೋಜಕರು ತಕರಾರು ಮಾಡಿದ್ದು, ಪ್ರಶ್ನೇ ಪಾಟೀ ಸವಾಲು ಅಡಿ ಸೂಕ್ತ ಇದೆ ಎಂದು ತಿಳಿದು ಮುಂದುವರೆಸಲು ಆದೇಶಿಸಲಾಯಿತು,** ಅದರಂತೆ ಸಾಕ್ಷಿಯು ಯಾವುದೇ ಪ್ರಕರಣ ಅವರ ಮೇಲೆ ಇರಲಿಲ್ಲ ಎಂದು ನುಡಿಯುತ್ತಾರೆ. 2 ಮೃತ ವ್ಯಕ್ತಿಗಳ ಮೇಲೆ ಕೊಲೆ ಪ್ರಕರಣ ಇದ್ದು, ಸಮಾಜದ ಅಭಿಪ್ರಾಯ ಅವರ ಮೇಲೆ ಸರಿ ಇರಲಿಲ್ಲ ಎಂದರೆ ಸರಿಯಲ್ಲ.

ಮೇಲೆ ಕಾಣಿಸಿಕೊಟ್ಟ ಆರೋಪಿತರಿಗೂ ಹಾಗೂ ಮೃತ ವ್ಯಕ್ತಿಗಳ ಸತ್ತ ವಿಚಾರದಲ್ಲಿ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮೃತ ದೇಹಗಳು ಬಿದ್ದ ಜಾಗ ಸಾರ್ವಜನಿಕ ರಸ್ತೆಯಾಗಿತ್ತು ಎಂದರೆ ಸರಿ. ಅಲ್ಲಿ ಆ ರಸ್ತೆಯಲ್ಲಿ ಸಾಕಷ್ಟು ಜನ ಊರಿಗೆ ಹೋಗಿ ಬರುವ ಓಡಾಟ ಮಾಡುತ್ತಾರೆ ಎಂದರೆ ಸರಿ. ಆ ದಿನ ನಾನು ಘಟನಾ ಸ್ಥಳಕ್ಕೆ ಹೋಗಿದ್ದು ಆಗ ಸಮಯ ಸಾ. 4.30 ಗಂಟೆಯಾಗಿತ್ತು. ನಾನು ಸ್ಥಳಕ್ಕೆ ಹೋದಾಗ ಪೊಲೀಸರು ಬಂದಿದ್ದು ಇತ್ತು. ಆ ಸಮಯದಲ್ಲಿ ನಾನು ಅಕ್ಕ-ಪಕ್ಕದ ಇದ್ದ ಜನರಿಗೆ ಘಟನೆಯ ಬಗ್ಗೆ ಕೇಳಲಿಲ್ಲ, ಸಾಕ್ಷಿಯು ಮುಂದುವರೆದು ಆದರೆ ಮರ್ಡರ ಆಯಿತು ಎಂದು ಅಲ್ಲಿ ಇದ್ದವರು ತಿಳಿಸಿಕೊಟ್ಟಿದ್ದು ಇತ್ತು. ಸಾಕ್ಷಿಯು ಪುನಃ ಮುಂದುವರೆದು ಆದರೆ ಈ ಒಂದು ವಿಚಾರ ಕುರಿತು ನನ್ನ ಮಗಳು ಪೋನ ಮುಖಾಂತರ ಹೇಳಿದ್ದು ಇತ್ತು ಎಂದು ನುಡಿಯುತ್ತಾರೆ. ನಾನು ಲೋಕಾಪುರನಲ್ಲಿ ಇದ್ದಾಗ ನನ್ನ ಮಗಳು ಪೋನ್ ಕರೆ ಮಾಡಿದ್ದು ಇತ್ತು. ನನ್ನ ಮಗಳು ಕರೆ ಮಾಡಿರುವ ಪೋನ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ನನ್ನ ಮಗಳು ಪೋನ ಉಪಯೋಗಿಸುವುದಿಲ್ಲ ಎಂದರೆ ಸರಿ. ನನ್ನ ಮಗಳು ನನಗೆ ಪೋನ ಕರೆ ಮಾಡಿದ್ದಳು ಎಂದು ಹೇಳಲಾಗಿದ್ದು, ಆಗ ಸಮಯ ಮಧ್ಯಾಹ್ನ 3.30 ಗಂಟೆಯಾಗಿತ್ತು. ಈ ಒಂದು ಸುದ್ದಿಯನ್ನು ತಿಳಿದು ಸ್ಥಳಕ್ಕೆ ಹೋದಾಗ ಈ ಒಂದು ಪೋನ ಕರೆ ಮಾಡಿರುವ ವಿಷಯವನ್ನು ಅಲ್ಲಿ ಮಂದಿಗಳಿಗೆ ಅಥವಾ ಪೊಲೀಸರಿಗೆ ನಾನು ಪೋನ ಕರೆ ಮಾಡಿ ವಿಚಾರ ತಿಳಿಸಿಲ್ಲ. ಈಗ ಮೇಲೆ ಕಾಣಿಸಿಕೊಟ್ಟಿರುವ ಸಂಗತಿಗಳು ಎಲ್ಲವು ಸತ್ಯಕ್ಕೆ ದೂರ

ಇದ್ದು, ಆ ಕುರಿತು ನಾನು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಆರೋಪಿತರಿಗೂ ಹಾಗೂ ಈ ಕೊಲೆ ಪ್ರಕರಣಕ್ಕೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಆರ್.ಟಿ.ಹೆಚ್.,**ಆರೋಪಿ-**4** ರಿಂದ **10** ಹಾಗೂ **16** ಪರ ವಕೀಲರಿಂದ

ನಾನು ಘಟನಾ ಸ್ಥಳಕ್ಕೆ ಹೋದಾಗ ಆಗಲೇ ಪೊಲೀಸರು ಬಂದಿದ್ದು ಇತ್ತು. ಅಲ್ಲಿ ಸ್ಥಳದಲ್ಲಿ ಸುಮಾರು 10 ರಿಂದ 15 ಜನ ಪೊಲೀಸರು ಇದ್ದರು. ನಾನು ಘಟನಾ ಸ್ಥಳಕ್ಕೆ ಹೋದಾಗ 100 ರಿಂದ 150 ಜನರು ಇದ್ದರು ಎಂದು ಹೇಳಲಾಗಿದ್ದು, ಆಗ ಆಯಾ ಜನರನ್ನು ಪೊಲೀಸರು ವಿಚಾರಿಸಿದ್ದು ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಅದನ್ನು ನೋಡಿಲ್ಲ ಕಾರಣ ನಾನು ದುಃಖದಲ್ಲಿ ಇದ್ದೆ ಎಂದು ನುಡಿಯುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ಅಂದೇ ದಿನ ಪಡೆದಿಲ್ಲ, ಆದರೆ ಮಾರನೇ ದಿನ 14 ನೇ ತಾರೀಖಿನಂದು ಪಡೆದಿದ್ದು ಇತ್ತು. ಅದನ್ನು ಪೋ.ಠಾಣೆಯಲ್ಲಿ ಪಡೆದಿದ್ದು ಇತ್ತು. ನಾನು ಆಗ ಠಾಣೆಗೆ ಹೋದಾಗ ಅಲ್ಲಿ ನನ್ನ ಜೊತೆ 4 ಜನರು ಇದ್ದರು, ಅವರು ಯಾರು ಎಂದರೆ ಯಲ್ಲಪ್ಪ, ಸದಾ ತಳಗೇರಿ, ಶಂಕ್ರಪ್ಪ ಈ ರೀತಿ ನಾವು 4 ಜನರು ಇದ್ದೇವು ಎಂದು ನುಡಿಯುತ್ತಾರೆ. ನನ್ನ ಹೇಳಿಕೆಯನ್ನು ಸುಮಾರು 1 ರಿಂದ 2 ಗಂಟೆಗಳ ಕಾಲ ಪಡೆದಿದ್ದು ಇತ್ತು. ಅದನ್ನು ಪಡೆದ ನಂತರ ನನಗೆ ಹೇಳಿದ್ದು ಇತ್ತು ಎಂದರೆ ಸರಿ. ಆ ಸಮಯದಲ್ಲಿ 13 ಜನ ಆರೋಪಿತರ ಹೆಸರನ್ನು ಹೇಳಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿಕೆ ನೀಡಿದ್ದೇನೆ ಎಂದು ಕಾಣಿಸಿಕೊಟ್ಟಿದ್ದು ಅದರಂತೆ ಯಾವುದೇ ಆರೋಪಿತರ ಹೆಸರುಗಳನ್ನು ತಿಳಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ.

ಆರೋಪಿತರಿಗೂ ಹಾಗೂ ಮೃತ ವ್ಯಕ್ತಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ, ಅವರು ಯಾವುದೇ ಅಪರಾಧ ಎಸಗಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ.

**ಈ ಮೊದಲು ಮಾಡಿದ ಎಲ್ಲಾ ಪಾಟೀ ಸವಾಲು ವಿಷಯವನ್ನು ಅಳವಡಿಸಿಕೊಳ್ಳುತ್ತೇನೆಂದು ನ್ಯಾಯಾಲಯಕ್ಕೆ ತಿಳಿಸಿಕೊಡುತ್ತಾರೆ.**

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

ದಿಃ 14.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**(ವಿಶೇಷ ಅಭಿಯೋಜಕರು ಈ ಹಿಂದೆ 13 ಜನ ಆರೋಪಿತರು ಕೊಲೆ ಮಾಡಿದ್ದರು ಅದರಲ್ಲಿ 3-4 ಜನರು ಹೆಸರು ಕಾಣಿಸಿಕೊಟ್ಟಿದ್ದು ಇತರೆ ಆರೋಪಿತರ ಹೆಸರು ತಿಳಿಸಿಕೊಟ್ಟಿಲ್ಲ, ಆ ಕುರಿತು ಪಾಟೀ ಸವಾಲು ಮಾಡಲು ಪ್ರಾರ್ಥನೆ ಮಾಡಿದ್ದು, ಪ್ರಶ್ನೆ ಮಾಡುವುದು ಸೂಕ್ತವೆಂದು ನ್ಯಾಯಾಲಯ ಅರ್ಥೈಸಿಕೊಂಡು ಆರೋಪಿತರ ಪರ ವಕೀಲರು ಅಕ್ಷೇಪಣೆ ಮಾಡಿದ್ದನ್ನು ತಳ್ಳಿಹಾಕಲಾಗಿದೆ. )**

**ಪಾಟೀ ಸವಾಲುಃ** ವಿಶೇಷ ಅಭಿಯೋಜಕರಿಂದಃ

ಈ ಹಿಂದೆ 13 ಜನ ಆರೋಪಿತರಲ್ಲಿ ಕೆಲವರು ಹೆಸರು ತಿಳಿಸಿದ್ದು, ಇತರೆ ಆರೋಪಿತರು ಯಾರು ಎಂದು ನೆನಪಿರಲಿಲ್ಲ ಎಂದು ಕಾಣಿಸಿಕೊಟ್ಟಿದ್ದು, ಆದರೆ ಈಗ ಹೇಳಲು ಆಗುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಈಗ ಹೇಳಬಹುದು ಎಂದು ನುಡಿದು, ಅವರು ರಾಜು ಬಾಡಗಿ, ಶಂಕ್ರಪ್ಪ ಗುಡದಿನ್ನಿ, ಅರುಣ ನಾಗರೆಡ್ಡಿ, ಕಿರಣ ನಾಗರೆಡ್ಡಿ, ಸಿದ್ದು ನಾಗರೆಡ್ಡಿ, ಗಣಾಚಾರಿ ಗಿರಿಮಲ್ಲ, ಕಾಡಪ್ಪ ನಾಗರೆಡ್ಡಿ, ಶ್ರೀಶೈಲ ವಾಲಿಮರದ ಇನ್ನು ಉಳಿದ ವ್ಯಕ್ತಿಗಳ ಹೆಸರು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ಇತರೆ ಆರೋಪಿತರು ಯಾರು ಎಂದು ಕಾಣಿಸಿಕೊಟ್ಟಿಲ್ಲ ಆದರೆ ಈಗ ಅವರುಗಳ ಹೆಸರನ್ನು ತಿಳಿಸಿಕೊಟ್ಟಿರುತ್ತೇನೆ, ಕಾರಣ ಏನೆಂದರೆ ಅವರು ಆರೋಪಿತರು ನಮ್ಮ ಊರಿನಲ್ಲಿ ಇದ್ದು, ನಾನು ಅಂಜಿ ಅವರ ಹೆಸರನ್ನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಮಗೆ ಏನಾದರೂ ಮಾಡಬಹುದು ಎಂದು ತಿಳಿದು ಹೇಳಲಿಲ್ಲ ಎಂದು ನುಡಿಯುತ್ತಾರೆ. ರೇಖಾ ನನ್ನ ಖಾಸಾ ಮಗಳು ಆಗಿರುತ್ತಾಳೆ. ಕಾಂಚನಾ ನನ್ನ ಅಣ್ಣನ ಮಗಳು ಆಗಿರುತ್ತಾಳೆ. ಈ ಎಲ್ಲ ಹೆಸರುಗಳನ್ನು ಕಾಂಚನಾ ಹಾಗೂ ರೇಖಾ ನನಗೆ ತಿಳಿಸಿದ್ದು ಇತ್ತು ಎಂದರೆ ಸರಿ.

**ಹೆಚ್ಚುವರಿ ಪಾಟೀ ಸವಾಲುಃ ಶ್ರೀ.ಎ.ಬಿ.ಜೆ.,**ಆರೋಪಿ-**1, 14** ಹಾಗೂ **15** ಪರ ವಕೀಲರಿಂದ

ಪ್ರಕರಣದಲ್ಲಿ ಮೃತ ವ್ಯಕ್ತಿಗಳು ಮರಣಪಟ್ಟ ನಂತರ ಪೊಲೀಸರು ನನ್ನನ್ನು ವಿಚಾರಿಸಲು ಬಂದಿದ್ದು ಇತ್ತು. ನಾನು ಆಗ ಅವರಿಗೆ ಎಲ್ಲಾ ವಿಚಾರವನ್ನು ಹೇಳಿದ್ದು ಇತ್ತು. ಆಗ ನಾನು ಪೊಲೀಸರಿಗೆ ಈಗ ಮೇಲೆ ಕಾಣಿಸಿಕೊಟ್ಟಿರುವ ಹೆಸರುಗಳನ್ನು ಅಂದು ಹೇಳಿದ್ದು ಇರುವುದಿಲ್ಲ ಎಂದರೆ ಸರಿ.

ಈಗ ಮೇಲೆ ಹೇಳಿದಂತೆ ಆರೋಪಿತರು ಕೊಲೆ ಮಾಡಿದ್ದು ಎಂದು ಕಾಣಿಸಿಕೊಟ್ಟಿದ್ದು ಅವುಗಳು ಸತ್ಯಕ್ಕೆ ದೂರವಿದ್ದು ನಾನು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದು ಹೇಳಲಾಗಿದ್ದು, ಅದರಲ್ಲಿ "ಹಂಗ ಮಂದಿ ಕಡದ ಉಗುದಾರ ಅಂತಾ ಸುದ್ದಿ ಬರಾಕತ್ತ್ಯಾರ" ಎಂಬುದಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಅದನ್ನು ಆರೋಪಿ ಪರ ವಕೀಲರ ಪ್ರಾರ್ಥನೆಯಂತೆ ನಿಶಾನೆ ಡಿ-6 ಎಂದು ಗುರುತಿಸಲಾಯಿತು.

ಈ ದಿನ ಚಾಸಾ-1 ರವರು ನ್ಯಾಯಾಲಯಕ್ಕೆ ಬಂದಿದ್ದು, ನಾನು ಅವರ ಜೊತೆ ಬಂದಿದ್ದೇನೆ ಎಂದರೆ ಸರಿ. ಈಗ ಅವರ ಮಾತುಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಆರ್.ಟಿ.ಹೆಚ್.,**ಆರೋಪಿ-**4** ರಿಂದ **10** ಹಾಗೂ **16** ಪರ ವಕೀಲರಿಂದ

ನಾನು ವಿಷಯ ತಿಳಿದು ಘಟನಾ ಸ್ಥಳಕ್ಕೆ ಹೋಗಿ ಆದ ನಂತರ ಸುಮಾರು 10 ನಿಮಿಷಗಳ ಕಾಲ ಆದ ನಂತರ ಪೊಲೀಸರು ಸ್ಥಳಕ್ಕೆ ಬಂದಿದ್ದು ಇತ್ತು. ಅಲ್ಲಿ ಸ್ಥಳದಲ್ಲಿ ಮನೆಗಳು, ಹೊಲಗಳು ಇವೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸ್ವಲ್ಪ ದೂರದಲ್ಲಿ ಇವೆ ಎಂದು ನುಡಿಯುತ್ತಾರೆ. ಪೊಲೀಸರು ಬಂದಾಗ 30 ರಿಂದ 40 ಜನರು ಇದ್ದರು ಎಂದು ಹೇಳಲಾಗಿದ್ದು, ಆಗ ಅವರುಗಳನ್ನು ಪೊಲೀಸರು ವಿಚಾರಿಸಿದ

ಬಗ್ಗೆ ನಾನು ನೋಡಿಲ್ಲ. ಅಲ್ಲಿ ಪೊಲೀಸರು ಸ್ಥಳದಲ್ಲಿ ರಾತ್ರಿ 8-00 ರಿಂದ 9-00 ರ ಅವಧಿವರೆಗೆ ಇದ್ದರು. ಆಗ ಪೊಲೀಸರು ನನ್ನನ್ನು ವಿಚಾರಿಸಿದ್ದು ಇರುವುದಿಲ್ಲ, ಸಾಕ್ಷಿಯು ಮುಂದುವರೆದು ಆದಾಗಿ 10-12 ದಿನಗಳು ಬಿಟ್ಟು ಬಂದು ನನ್ನನ್ನು ವಿಚಾರಿಸಿದ್ದು ಇತ್ತು ಎಂದು ನುಡಿಯುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ನನ್ನ ಮನೆಯಲ್ಲಿ ಪಡೆದಿದ್ದು ಇತ್ತು. ಈಗ ಮೇಲೆ ಕಾಣಿಸಿಕೊಟ್ಟಂತೆ ಹೆಸರುಗಳನ್ನು ತಿಳಿಸಿಕೊಟ್ಟಿದ್ದು, ಅದರ ಜೊತೆ ಅವರ ಭಯ ಇತ್ತು ಎಂದು ವಿಚಾರ ನ್ಯಾಯಾಲಯಕ್ಕೆ ಪುಷ್ಟಿಕರಿಸಿದ್ದು, ಈ ಒಂದು ವಿಚಾರವನ್ನು ಪೊಲೀಸರಿಗೂ ಸಹ ತಿಳಿಸಿಕೊಟ್ಟಿದ್ದು ಇದೆ. ನಾನು ಮೇಲಿನಂತೆ ಯಾವುದೇ ಸಂಗತಿಗಳನ್ನು ಪೊಲೀಸರಿಗೆ ಕಾಣಿಸಿಕೊಟ್ಟಿಲ್ಲ, ಈ ಒಂದು ವಿಚಾರವನ್ನು ಈಗ ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಅಸತ್ಯ ಸಂಗತಿಯನ್ನು ತಿಳಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಮಾಡದೇ ಇದ್ದರೂ ಅವರು ತಪ್ಪಿಸ್ಥರು ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತಪಟ್ಟ ವ್ಯಕ್ತಿಗಳಿಗೂ ಈ ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಈ ಮೊದಲು ಮಾಡಿದ ಎಲ್ಲಾ ಪಾಟೀ ಸವಾಲು ವಿಷಯವನ್ನು ಅಳವಡಿಸಿಕೊಳ್ಳುತ್ತೇನೆಂದು ನ್ಯಾಯಾಲಯಕ್ಕೆ ತಿಳಿಸಿಕೊಡುತ್ತಾರೆ.**

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

ದಿಃ 14.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**(ವಿಶೇಷ ಅಭಿಯೋಜಕರು ಈ ಹಿಂದೆ 13 ಜನ ಆರೋಪಿತರ ಹೆಸರು ನೆನಪಿಲ್ಲ ಎಂದು ಕಾಣಿಸಿಕೊಟ್ಟಿದ್ದು ಆ ಕುರಿತು ಪಾಟೀ ಸವಾಲು ಮಾಡಲು ಪ್ರಾರ್ಥನೆ ಮಾಡಿದ್ದು, ಪ್ರಶ್ನೆ ಮಾಡುವುದು ಸೂಕ್ತವೆಂದು ನ್ಯಾಯಾಲಯ ಅರ್ಥೈಸಿಕೊಂಡು ಆರೋಪಿತರ ಪರ ವಕೀಲರು ಅಕ್ಷೇಪಣೆ ಮಾಡಿದ್ದನ್ನು ತಳ್ಳಿಹಾಕಲಾಗಿದೆ. )**

**ಪಾಟೀ ಸವಾಲುಃ** ವಿಶೇಷ ಅಭಿಯೋಜಕರಿಂದಃ

ಈ ಹಿಂದೆ 13 ಜನ ಆರೋಪಿತರು ಯಾರು ಎಂದು ನೆನಪಿರಲಿಲ್ಲ ಎಂದು ಕಾಣಿಸಿಕೊಟ್ಟಿದ್ದು, ಆದರೆ ಈಗ ನೆನಪು ಮಾಡಿಕೊಂಡು ಹೇಳಲು ಆಗುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಈಗ ನನಗೆ ನೆನಪು ಇದೆ ಎಂದು ನುಡಿದು, ಅವರು ಮಲ್ಲಪ್ಪ ಹುದ್ದಾರ, ಶಂಕ್ರಪ್ಪ, ರಾಜು, ಶ್ರೀಶೈಲಪ್ಪ ವಾಲಿಮರದ, ಅರುಣ, ಕಿರಣ, ಲಕ್ಷ್ಮಣಾ ಜಕ್ಕಾಣಿ, ಸ್ವಾಮಿಗಳು ಗಣಾಚಾರಿ ಈ ರೀತಿ ಹೆಸರುಗಳು ಇವೆ. ಆಗ ನಾನು ನೆನಪಿಲ್ಲ ಎಂದು ಕಾಣಿಸಿಕೊಟ್ಟಿರುವ ಕಾರಣ ಏನೆಂದರೆ ನಾನು ದುಃಖದಲ್ಲಿ ಇದ್ದೇನು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನನಗೆ ಆಗ ಭಯ ಇತ್ತು ಈಗೂ ಕೂಡ ಭಯ ಇದೆ ಎಂದು ನುಡಿಯುತ್ತಾರೆ.

**ಹೆಚ್ಚುವರಿ ಪಾಟೀ ಸವಾಲುಃ ಶ್ರೀ.ಎ.ಬಿ.ಜೆ.,**ಆರೋಪಿ-**1, 14** ಹಾಗೂ **15** ಪರ ವಕೀಲರಿಂದ

ದೇಹಗಳು ಬಿದ್ದ ಜಾಗೆ ಸಾರ್ವಜನಿಕ ರಸ್ತೆಗಳು ಇತ್ತು ಎಂದರೆ ಸರಿ. ಆ ರಸ್ತೆ ಸಾಕಷ್ಟು ಜನ ಓಡಾಟ ಮಾಡುವ ರಸ್ತೆ ಇರುತ್ತದೆ ಎಂದರೆ ಸರಿ. ಅಲ್ಲಿ ಆಜು-ಭಾಜು ಹೊಲ ಹಾಗೂ ಅಲ್ಲಿಯೇ ಮನೆಗಳು ಇವೆ ಎಂದರೆ ಸರಿ. ಅಲ್ಲಿ ವ್ಯವಸಾಯ ಮಾಡುವ ಜನರು ಅಲ್ಲಿ ಮನೆಯಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. ಮೇಲೆ ಕಾಣಿಸಿಕೊಟ್ಟ

ಹೆಸರುಗಳು ನಾನು ಪೊಲೀಸರಿಗೆ ತಿಳಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ರಸ್ತೆ ಮಲ್ಲಪ್ಪ ಹುದ್ದಾರ (1 ನೇ ಆರೋಪಿ) ಮನೆಗೆ ಹೋಗಬೇಕಾದರೆ ಬರುತ್ತದೆ ಎಂದರೆ ಸರಿ. ಆ ರಸ್ತೆ ಮುಖಾಂತರ ಊರಿಗೆ ಮತ್ತು ಆಯಾ ಆರೋಪಿ ಮನೆಗೆ ಹೋಗಬೇಕು ಎಂದರೆ ಸರಿ. ಮೇಲೆ ಕಾಣಿಸಿಕೊಟ್ಟ ಹೆಸರುಗಳು ಈಗ ನಾನು ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಅವರುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ಈ ಕುರಿತು ಸಧ್ಯ ನಾನು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಆರ್.ಟಿ.ಹೆಚ್.,**ಆರೋಪಿ-4 ರಿಂದ **10** ಹಾಗೂ **16** ಪರ ವಕೀಲರಿಂದ

**ಈ ಮೊದಲು ಮಾಡಿದ ಎಲ್ಲಾ ಪಾಟೀ ಸವಾಲು ವಿಷಯವನ್ನು ಅಳವಡಿಸಿಕೊಳ್ಳುತ್ತೇನೆಂದು ನ್ಯಾಯಾಲಯಕ್ಕೆ ತಿಳಿಸಿಕೊಡುತ್ತಾರೆ.**

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

ದಿಃ 14.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಆರ್.ಟಿ.ಹೆಚ್.,**ಆರೋಪಿ-**4** ರಿಂದ **10** ಹಾಗೂ **16** ಪರ ವಕೀಲರಿಂದ

ನನಗೆ ಪಂಚನಾಮೆಗೆ ಹಾಜರು ಆಗಿ ಉಳಿಯಲು ಪೊಲೀಸರು ಕರೆಸಿದ್ದು ಇತ್ತು, ಈಗ ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ನನಗೆ ಪಂಚನಾಮೆ ಅಡಿ ನೋಟೀಸನ್ನು ನೀಡಿದ್ದು ಇರುವುದಿಲ್ಲ. ಪೊಲೀಸರು ಕರೆದಾಗ ನಾನು ಶಿರೋಳ ಊರಿನ ಕನ್ನಡ ಶಾಲೆಯ ಬಳಿ ಇದ್ದೆ, ಆಗ ಅಲ್ಲಿ ನಾನು ಒಬ್ಬನೇ ಇದ್ದೆ. ನನಗೆ ಘಟನಾ ಸ್ಥಳಕ್ಕೆ ಸುಮಾರು ಮಧ್ಯಾಹ್ನ 1.30 ಗಂಟೆಗೆ ಹೋಗಿದ್ದು ಇತ್ತು. ಅಲ್ಲಿ ಸ್ಥಳದಲ್ಲಿ ಮುಖ್ಯ ರಸ್ತೆ ಇದ್ದು, ಜನರು ಓಡಾಟ ಮಾಡುತ್ತಾರೆ ಎಂದರೆ ಸರಿ. ಅಲ್ಲಿ ಸುತ್ತಮುತ್ತ ಜಾಗದಲ್ಲಿ ಹೊಲಗಳು ಹಾಗೂ ಮನೆಗಳು ಇವೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋದಾಗ ನಮ್ಮ ಮುಂಚಿತವಾಗಿ ಅಲ್ಲಿ ಯಾವುದೇ ಪೊಲೀಸರು ಇರಲಿಲ್ಲ.

ಚಾಸಾ-1 ರವರು ನನಗೆ ಮೊದಲಿನಿಂದಲೂ ಪರಿಚಯಸ್ಥರು ಎಂದರೆ ಸರಿ. ಈ ದಿನ ಚಾಸಾ-1 ರವರು ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. **ಪ್ರಸ್ತುತ ಪ್ರಶ್ನೆಗೆ ವಿಶೇಷ ಅಭಿಯೋಜಕರು ಅಕ್ಷೇಪಣೆ ವ್ಯಕ್ತ ಪಡಿಸಿದ್ದು, ಪ್ರಶ್ನೆ ಹಾಗೂ ಉತ್ತರ ಸೂಕ್ತ ಇರುವಿಕೆಯ ಕುರಿತು ವಾದಾಂಶದ ಅಡಿ ತಿಳಿದುಕೊಳ್ಳಬಹುದಾಗಿದೆ ಎಂದು ನ್ಯಾಯಾಲಯ ಅರ್ಥೈಸಿಕೊಂಡಿದೆ.**

ಚಾಸಾ-1 ರವರ ಮಾತುಕೇಳಿ ನಾನು ಈಗ ಅವರಂತೆ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸಾಕ್ಷಿಯು ಹುಂ ಎಂದು ನುಡಿಯುತ್ತಾರೆ.

**ಉಳಿದ ವಿಷಯದಲ್ಲಿ ಈ ಮೊದಲು ಮಾಡಿದ ಪಾಟೀ ಸವಾಲು ಶ್ರೀ ಎಸ್.ಸಿ.ಹೆಚ್. ವಕೀಲರು ಮಾಡಿದ್ದನ್ನು ಅಳವಡಿಸಿಕೊಳ್ಳುತ್ತೇನೆಂದು ನ್ಯಾಯಾಲಯಕ್ಕೆ ತಿಳಿಸಿಕೊಡುತ್ತಾರೆ.**

ಮರು ಸವಾಲು ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

ದಿಃ 14.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಆರ್.ಟಿ.ಹೆಚ್.,**ಆರೋಪಿ-**4** ರಿಂದ **10** ಹಾಗೂ **16** ಪರ ವಕೀಲರಿಂದ

ಘಟನಾ ಸ್ಥಳಕ್ಕೆ ನಾನು ಹೋಗಿದ್ದೆ ಎಂದು ಹೇಳಲಾಗಿದ್ದು, ಆಗ ದಿನಾಂಕಃ 17.10.2019 ಆಗಿದ್ದು ಆಗ ಸಮಯ ಬೆ. 11.30 ಯಾಗಿತ್ತು. ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಅಲ್ಲಿ ಪೊಲೀಸರು ಇದ್ದರು. ಅಂದಾಜು 3 ರಿಂದ 4 ಜನರು ಪೊಲೀಸರು ಇದ್ದರು. ಅಲ್ಲಿ ಒಬ್ಬ ಪಿ.ಎಸ್.ಐ ಆರ್.ಕೆ.ಪಾಟೀಲ ಎಂಬುವವರು ಹಾಗೂ ಇತರೆ ಸಿಬ್ಬಂದಿಯವರು ಇದ್ದರು. ಘಟನಾ ಸ್ಥಳ ಎಂದು ಕಾಣಿಸಿಕೊಟ್ಟಿದ್ದು ಅಲ್ಲಿ ಸಾಕಷ್ಟು ಜನ ಓಡಾಡುವ ಸ್ಥಳ ಆಗಿರುತ್ತದೆ ಎಂದರೆ ಸರಿ. ಅಲ್ಲಿ ಅಕ್ಕ-ಪಕ್ಕದಲ್ಲಿ ಹೊಲಗಳು ಹಾಗೂ ಮನೆಗಳು ಇವೆ ಎಂದರೆ ಸರಿ. ಅಲ್ಲಿ ಹಲವಾರು ಜಮೀನುಗಳಲ್ಲಿ ಊರಿನ ವ್ಯಕ್ತಿಗಳು ಅಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ.

ನನಗೆ ಆ ಜಾಗಕ್ಕೆ ಕರೆದುಕೊಂಡು ಹೋಗಿ ಪಂಚನಾಮೆ ಮಾಡಿರುತ್ತಾರೆ ಎಂಬುದಾಗಿ ಈ ಹಿಂದೆ ನಾನು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಮೃತಪಟ್ಟ ವ್ಯಕ್ತಿಗಳು ನನ್ನ ಸಂಬಂಧಿಕರು ಆಗಬೇಕು ಎಂದರೆ ಸರಿ. ಪಿರ್ಯಾದುದಾರರು ಸಹ ನನ್ನ ಸಂಬಂಧಿಕ ಎಂದರೆ ಸರಿ. ಮೇಲೆ ಕಾಣಿಸಿಕೊಟ್ಟಂತೆ ಪಿರ್ಯಾದಿದಾರ ನನ್ನ ಸಂಬಂಧಿಕ ಇರುವ ಹಿನ್ನಲೆಯಲ್ಲಿ ಈ ದಿನ ನಾನು ಮುಖ್ಯ ಸಾಕ್ಷ್ಯದಲ್ಲಿ ಕಾಣಿಸಿಕೊಟ್ಟಿರುವ ಸಂಗತಿಗಳು ಎಲ್ಲವೂ ಸತ್ಯಕ್ಕೆ ದೂರವಿದ್ದು, ಆ ಕುರಿತು ನಾನು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಉಳಿದ ವಿಷಯದಲ್ಲಿ ಈ ಮೊದಲು ಮಾಡಿದ ಪಾಟೀ ಸವಾಲು ಶ್ರೀ ಎಸ್.ಸಿ.ಹೆಚ್. ವಕೀಲರು ಮಾಡಿದ್ದನ್ನು ಅಳವಡಿಸಿಕೊಳ್ಳುತ್ತೇನೆಂದು ನ್ಯಾಯಾಲಯಕ್ಕೆ ತಿಳಿಸಿಕೊಡುತ್ತಾರೆ.**

ಮರು ಸವಾಲು ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.